ಕಾರ್ಯಗತವಾಗುತ್ತದೆ. ಆದ್ದರಿಂದ ಇದಕ್ಕೆ ಮಂಜೂರಾತಿ ಕೊಡುವುದಕ್ಕೆ ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಕುಡಿಯುವ ನೀರಿನ ಯೋಜನೆಗೆ ಹಾಗೂ ಒಳಚರಂಡಿ ಯೋಜನೆ ಸಂಬಂಧಿಸಿದಂತೆ ಪ್ರಸ್ತಾವನೆಗಳು ಬಹಳಷ್ಟು ನಗರಪಾಲಿಕೆಗಳಿಂದ ಸರ್ಕಾರಕ್ಕೆ ಬಂದಿದೆ. ಆ ಪ್ರಸ್ತಾವನೆಗಳನ್ನು ಮಂಡಳಿಯ ಮುಂದಿಟ್ಟು ಅಲ್ಲಿಂದ ಅಂಗೀಕಾರವಾಗಿ ಸರ್ಕಾರಕ್ಕೆ ಬಂದ ನಂತರ ನಾವು ಅದಕ್ಕೆ ಮಂಜೂರಾತಿ ಕೊಡುತ್ತೇವೆ.

ನಿಯಮ 351ರ ಮೇರೆಗೆ

(1) ವಿಷ್ಣು ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ಗೆ ಪ್ರೋತ್ಸಾಹ ನೀಡುವ ಸಲುವಾಗಿ ಕನಿಷ್ಠ 5 ಲಕ್ಷ ರೂಪಾಯಿಗಳ ಬಿಡುಗಡೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉಪಾಧ್ಯಕ್ಷರೆ, ಸೆಪ್ಟಂಬರ್ 14ರಿಂದ ಮಂಗಳೂರಿನಲ್ಲಿ ನಡೆಯಲಿರುವ ಏಳನೇ ಪುರುಷ ಮತ್ತು ಆರನೇ ಮಹಿಳೆಯರ ವಿಷ್ಣು ಪವರ್ ಲಿಫ್ಟಿಂಗ್ ಒಕ್ಕೂಟದ ಆಶ್ರಯದಲ್ಲಿ ಕರ್ನಾಟಕ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ದೇಶದ ಮತ್ತು ವಿದೇಶದ ಸುಮಾರು 150 ಪವರ್ ಲಿಫ್ಟರ್‌ಗಳು ಭಾಗವಹಿಸಲಿದ್ದಾರೆ. ವಿಷ್ಣು ಪವರ್‌ಲಿಫ್ಟಿಂಗ್ ಒಕ್ಕೂಟ ಮತ್ತು ಭಾರತೀಯ ಪವರ್ ಲಿಫ್ಟಿಂಗ್ ಸಂಸ್ಥೆಯು ಈ ಚಾಂಪಿಯನ್ ಶಿಪ್‌ನ್ನು ಸಂಘಟಿಸುತ್ತದೆ. ಹಾಲಿ ವಿಷ್ಣು ಚಾಂಪಿಯನ್ ಕಜಕಿಸ್ಥಾನ ಸಹಿತ ಚೈನೀಸ್, ಥೈಪೆ, ಜಪಾನ್, ಕೊರಿಯಾ, ಪಾಕಿಸ್ಥಾನ, ಶ್ರೀಲಂಕಾ, ಇಂಡೋನೇಷಿಯಾ, ಫಿಲಿಪ್ಪೈನ್ಸ್ ಮತ್ತು ಭಾರತ ಈ ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ. ಸುಮಾರು 6 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿಷ್ಣು ಚಾಂಪಿಯನ್‌ಶಿಪ್ ಸ್ಪರ್ಧೆ ನಡೆಯಲಿರುವುದು ಕರ್ನಾಟಕ ರಾಜ್ಯಕ್ಕೆ ಹೆಮ್ಮೆ ತರುವ ಈ ವಿಷ್ಣು ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ಗೆ ಪ್ರೋತ್ಸಾಹ ಕೊಡಲು ಸರ್ಕಾರ ಕನಿಷ್ಠ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇದು ಇನ್ನೂ ನನ್ನ ಗಮನಕ್ಕೆ ಬಂದಿಲ್ಲ. ಬಂದ ನಂತರ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಈ ಪ್ರಶ್ನೆಯನ್ನು ಅವರ ಇಲಾಖೆಗೆ ಕಳುಹಿಸಿ ಒಂದು ವಾರ ಆಗಿದೆ.

(2) ಕಾಪು ಮತ ಕ್ಷೇತ್ರದ ಮಳೂರು ಗ್ರಾಮ ಮತ್ತು ಶಿರ್ವ ಗ್ರಾಮಗಳಲ್ಲಿ ವಿಶ್ವ ಬ್ಯಾಂಕ್ ಯೋಜನೆ ಅನ್ವಯ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಉಪಾಧ್ಯಕ್ಷರೆ, ಕಾಪು ಮತ ಕ್ಷೇತ್ರದ ಮೂಳೂರು ಗ್ರಾಮ ಮತ್ತು ಶಿರ್ವ ಗ್ರಾಮಗಳಲಿ ವಿಶ್ವ ಬ್ಯಾಂಕ್ ಯೋಜನೆಯನ್ವಯ ಮಂಜೂರಾಗಿರುವ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಿ ಸಂಪೂರ್ಣಗೊಳಿಸಿರುವುದಿಲ್ಲ. ಸಾರ್ವಜನಿಕರಿಗೆ ಕುಡಿಯುವ ನೀರಿನ ತೀವ್ರ ತೊಂದರೆ ಇರುವುದರಿಂದ ಯೋಜನಾ ಕಾಮಗಾರಿಗಳನ್ನು ತ್ವರಿತವಾಗಿ ಸಂಪೂರ್ಣಗೊಳಿಸಿ ಜೀವನಾವಶ್ಯಕವಾಗಿರುವ ಕುಡಿಯುವ ನೀರನ್ನು ಒದಗಿಸುವಲ್ಲಿ ತುರ್ತು ಕ್ರಮವನ್ನು

ತೆಗೆದುಕೊಳ್ಳಲು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ವಿಶ್ವಬ್ಯಾಂಕ್ ಸಹಾಯದಿಂದ ತೆಗೆದುಕೊಂಡಿರುವ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ-ಮೊದಲನೇ ಹಂತದಲ್ಲಿ, ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಉಡುಪಿಯ ವ್ಯಾಪ್ತಿಯಲ್ಲಿ ಬರುವ 9 ಗ್ರಾಮಗಳಲ್ಲಿ ಕಾಪು ಮತ ಕ್ಷೇತ್ರದ ಮಳೂರು ಗ್ರಾಮ ಮತ್ತು ಶಿರ್ವ ಗ್ರಾಮಗಳು ಸೇರಿರುತ್ತವೆ. ಈ 9 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾಮಗಾರಿಗಳನ್ನು ಒಂದು ಪೂರ್ವ ಕೆಲಸವೆಂದು ಪರಿಗಣಿಸಿ ಒಬ್ಬ ಗುತ್ತಿಗೆದಾರರಿಗೆ ಕಾರ್ಯ ನಿರ್ವಹಿಸಲು ಜುಲೈ 1995ರಲ್ಲಿ ವಹಿಸಲಾಗಿದೆ. ಈಗ 9 ಗ್ರಾಮಗಳ ಪೈಕಿ 8 ಗ್ರಾಮಗಳ (ಇವುಗಳಲ್ಲಿ ಮಳೂರು ಗ್ರಾಮ ಮತ್ತು ಶಿರ್ವ ಗ್ರಾಮಗಳು ಸೇರಿವೆ) ಆರ್.ಸಿ.ಸಿ. ಮೇಲ್ಮಟ್ಟದ ಸಂಗ್ರಾಹಾಗಾರದ ಕಾರ್ಯವನ್ನು ಗುತ್ತಿಗೆದಾರರು ಪ್ರಾರಂಭಿಸಿದ್ದಾರೆ. ಈ 9 ಗ್ರಾಮಗಳ ಕಾಮಗಾರಿಗಳನ್ನು ಸಂಪೂರ್ಣವಾಗಿ ಮುಗಿಸಲು 24 ತಿಂಗಳುಗಳ ಕಾಲಾವಕಾಶವನ್ನು ನೀಡಲಾಗಿದೆ.

ಇದಲ್ಲದೆ ಮಳೂರು ಗ್ರಾಮಕ್ಕೆ ನೀರು ಸರಬರಾಜು ಯೋಜನೆಗೆ 26.1 ಲಕ್ಷ ರೂಪಾಯಿಗಳು ಮತ್ತು ಶಿರ್ವ ಗ್ರಾಮಕ್ಕೆ 51.13 ಲಕ್ಷ ರೂಪಾಯಿಗಳ ಅಂದಾಜು ಖರ್ಚು ಮಾಡಲಾಗಿದೆ. ಮಾಳೂರು ಗ್ರಾಮದಲ್ಲಿ ಈಗ 2 ತೆರೆದ ಬಾವಿಗಳ ನಿರ್ಮಾಣ ಪೂರ್ಣಗೊಂಡಿದೆ. ಒಂದು ಓವರ್‌ಹೆಡ್ ಟ್ಯಾಂಕಿನ ಕೆಲಸ ಈಗಾಗಲೇ ಪ್ರಗತಿಯ ಹಂತದಲ್ಲಿದೆ. ಶಿರ್ವ ಗ್ರಾಮದಲ್ಲಿ ಈಗಾಗಲೇ 3 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಮತ್ತು ಆರ್‌ಸಿಸಿಯ ಓವರ್ ಹೆಡ್ ಟ್ಯಾಂಕಿನ ಕೆಲಸ ಶೀಘ್ರ ಪ್ರಗತಿಯಲ್ಲಿದೆ. ಈಗ ಗುತ್ತಿಗೆದಾರರ ನೇಮಕ ಆಗಿರುವುದರಿಂದ ಕೆಲಸವನ್ನು ಬೇಗ ಪೂರ್ಣ ಗೊಳಿಸುತ್ತೇವೆ.

(3) ರಾಜ್ಯದಲ್ಲಿ ಇಂಜಿನಿಯರಿಂಗ್ ಪ್ರವೇಶ ಕುರಿತು.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷರೆ, As the C.E.T. Cell is making spot allotments in respect of admission to Engineering Courses, it is a confusion in the minds of the candidates that the free seats which are left over unfilled from other categories, when the General Merit Urban list is completed. Whether the vacant items of other categories other than the General Merit Urban, is carried over to this category and filled up in the latter stage after exhausting the qualified list in the first round, by taking it in the consideration in the second round.

In addition to the above, if a candidate is got a seat under payment Quota under G.M (Urban) in Engineering seat, afterwards in the second round if he is eligible for a free seat after carrying over the seats from other categories to the G.M. (Urban), Whether the amount paid as payment seat, got seat in the first round, is refunded and re-adjusted to a free seat.

A detailed procedural aspect is to be made know, to the students , as it is a confusion and dilemma in their minds, as some of them are poor students. I request the hon. Minister to give a suitable reply.